# ಅಹಂ

ಅಹಂಕಾರ ಎಂದರೆ ಹೊಸ ಜ್ಞಾನವನ್ನು ಕಲಿತುಕೊಳ್ಳದೇ ಇರುವ ಹಳೆಯ ಜ್ಞಾನದಿಂದ ನಮ್ಮಲ್ಲಿ ಒಂದು ರೂಪವನ್ನು ಸೃಷ್ಟಿಸಿಕೊಂಡು ಅದರಲ್ಲೇ ಇರುವುದು ಎಂದರ್ಥ. ಅದೇ ರೀತಿ, ನನ್ನದೇ ಸರಿ, ನಾನೇ ಸರಿಯಾಗಿದ್ದೇನೆಂದು, ಇತರರು ಸರಿಯಾಗಿಲ್ಲವೆಂದು ಹೇಳಿಕೊಳ್ಳುವುದು ಸಹ ಅಹಂಕಾರವೇ. ನಮಗಿರುವ ಜ್ಞಾನದ ಆಧಾರಕ್ಕನುಗುಣವಾಗಿ ನಮಗೆ ಶಾರೀರಕ, ಮಾನಸಿಕ ಮತ್ತು ಅಧ್ಯಾತ್ಮಿಕ ಬಂಧಗಳು ಏರ್ಪಡುತ್ತವೆ. ಇದರ ಪ್ರಕಾರವೇ ನಾವು ಕಷ್ಟ-ಸುಖಗಳನ್ನು ಅನುಭವಿಸುತ್ತೇವೆ.

ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಅಹಂಕಾರವೂ ಸಹ ದಿವ್ಯವಾದುದೇ. ಏಕೆಂದರೆ ನಮಗೆ ಅಹಂ ಇದ್ದರೇನೇ ದೈವದ ಬೆಲೆ ತಿಳಿಯುತ್ತದೆ. ಏಕತ್ವದಲ್ಲಿದ್ದಾಗ ನಾವು ದಿವ್ಯತ್ವದಲ್ಲೇ ಹುಟ್ಟಿ ಬೆಳೆದಿದ್ದೇವೆಯೇ ಹೊರತು ದಿವ್ಯತ್ವದ ಅನುಭೂತಿಯನ್ನು ಹೊಂದಲಾರದೇ ಹೋದೆವು. ಇದಕ್ಕೆ ಕಾರಣ ನಮಗೂ ಹಾಗೂ ದಿವ್ಯತ್ವಕ್ಕೂ ನಡುವೆ ದೂರ ಇಲ್ಲದೇ ಇರುವುದು. ಉದಾಹರಣೆಗೆ: ಸಮುದ್ರದಲ್ಲಿ ಹುಟ್ಟಿ ಬೆಳೆದು ಸಾಯುವ ಮೀನಿಗೆ, ಸಮುದ್ರ ಹಾಗೂ ನೀರಿನ ಬಗ್ಗೆ ಅರಿವು ಇರುವುದಿಲ್ಲ. ಏಕೆಂದರೆ ಅದು ಯಾವಾಗಲೂ ಅದರಲ್ಲೇ ಇರುವುದರಿಂದಾಗಿ. ಅಂದರೆ ಸದಾ ನೀರಿನಲ್ಲೇ ಇರುವುದರಿಂದಾಗಿ ತನಗೂ ಮತ್ತು ನೀರಿನ ನಡುವೆ ಅಂತರವಿಲ್ಲದ ಕಾರಣ ಮೀನಿಗೆ ನೀರಿನ ಅರಿವು ತಿಳಿಯುತ್ತಿಲ್ಲ.

ಆದ್ದರಿಂದ ದಿವ್ಯತ್ವದಿಂದ ದೂರವಾಗಲು ನಾವೇ ಅಹಂ ನ್ನು ಸೃಷ್ಟಿಸಿದ್ದೇವೆ, ಹಾಗೂ ಅದಕ್ಕೆ ದೂರವನ್ನು ಸೃಷ್ಟಿಸಬೇಕೆಂದು, ಅಂದರೆ ನಾನು ಬೇರೆ, ದೈವವು ಬೇರೆ ಎನ್ನುವ ಭ್ರಮೆಯನ್ನು ಕಲ್ಪಿಸಬೇಕೆಂದು ಆಜ್ಞಾಪಿಸಿದ್ದೇವೆ. ಆದುದರಿಂದಾಗಿ ಅದು ನಮಗೆ ಮತ್ತು ನಮ್ಮ ದಿವ್ಯತ್ವದ ಮಧ್ಯ ದೂರವನ್ನು ಸೃಷ್ಟಿಸಿದೆ. ಅಂದರೆ ನಮ್ಮನ್ನು ತನ್ನ ಮಾಯಾ ಪರದೆಯಿಂದ ಆವರಿಸಿ, ನಮ್ಮನ್ನು ದ್ವಂದ್ವದ ಆಟದಲ್ಲಿ ಮುಳುಗುವಂತೆ ಮಾಡಿದೆ. ಇಲ್ಲಿ ದ್ವಂದ್ವಗಳ ಆಟವೆಂದರೆ ಸ್ವಚ್ಛವಾದ ಶಕ್ತಿಯನ್ನು ಎರಡು ವಿರುದ್ಧ ಶಕ್ತಿಗಳನ್ನಾಗಿ ವಿಭಜಿಸಿ, ನಾವು ಯಾವುದಾದರೊಂದು ಕಡೆ ಇದ್ದು ಮತ್ತೊಂದರೊಂದಿಗೆ ಯುದ್ಧವನ್ನು ಮಾಡುವುದೆಂದು ಅರ್ಥ. ಈ ಆಟದಲ್ಲಿ ನಾವು ಸಂಪೂರ್ಣವಾಗಿ ಮುಳುಗಿ ಹೋಗಿರುವುದರಿಂದಲೇ ವಿಭಜನೆಯಿಲ್ಲದ ಸ್ವಚ್ಛವಾದ ಶಕ್ತಿಯನ್ನು ಹಾಗೂ ಸ್ವಚ್ಛವಾದ ಚೈತನ್ಯವನ್ನು ನಾವು ಅನುಭೂತಿ ಹೊಂದಲು ಸಾಧ್ಯವಾಗುತ್ತಿಲ್ಲ.

ನಮ್ಮ ಆಜ್ಞಾಪನೆಯ ಪ್ರಕಾರ ಅಹಂ ದೂರವನ್ನು ಸೃಷ್ಟಿಸಿರುವುದರಿಂದಲೇ ನಾವು ದಿವ್ಯತ್ವದ ರುಚಿಯನ್ನು ನೋಡುವ ಅವಕಾಶ ನಮಗೆ ಸಿಕ್ಕಿದೆ. ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಮಾನವನು ಭಾವನಾಪರವಾಗಿ, ದಿವ್ಯತ್ವದಿಂದ ಹೊರಬಂದು, ಒಂದು ರೂಪವನ್ನು ಸೃಷ್ಟಿಸಿಕೊಂಡಿದ್ದೇನೆನ್ನುವ ಭ್ರಮೆಯಲ್ಲಿ ಜೀವಿಸುತ್ತಿದ್ದಾನೆ.

ನಾವು ಹುಟ್ಟಿದಾಗ ನಮಗೆ ದಿವ್ಯತ್ವದ ಅರಿವು ಇರುತ್ತದೆ. ಆದರೆ ಸ್ವಚ್ಛವಾಗಿರುವ ನಮ್ಮನ್ನು, ತಂದೆ-ತಾಯಿಯರು ಇದು ಒಳ್ಳೆಯದು, ಅದು ಕೆಟ್ಟದ್ದು ಎಂದು ಕಲಿಸುತ್ತಾರೆ. ಇದರಿಂದ ನಮ್ಮಲ್ಲಿ ಸೀಮಿತವಾದ ರೂಪವು ಏರ್ಪಡುತ್ತದೆ. ಇದನ್ನೇ ನಾವು ಅಹಂಕಾರ ಎಂದು ಹೇಳುತ್ತಿದ್ದೇವೆ. ಹಾಗೆಯೇ ನಾವು ಯಾವುದಾದರೊಂದು ಸಾಮರ್ಥ್ಯದ ಬಗ್ಗೆ ತಿಳಿದುಕೊಂಡು, ಅದನ್ನು ಸಾಧನೆಯನ್ನು ಮಾಡಿ, ಅದರಲ್ಲಿ ಪ್ರಾವಿಣ್ಯತೆಯನ್ನು ಪಡೆದ ತಕ್ಷಣ ನಮ್ಮಲ್ಲಿ ಅಹಂ ಹೆಚ್ಚುತ್ತದೆ. ಅದನ್ನು ಹತ್ತು ಜನರಿಗೆ ಹಂಚುತ್ತಾ, ನಾನೇ ಇದನ್ನು ಸಾಧಿಸಿದ್ದೇನೆಂದು ಹೆಮ್ಮೆಯಿಂದ

ಹೇಳಿಕೊಳ್ಳುತ್ತೇವೆ. ಇದರಿಂದಲೇ ನಮಗೆ ಸಮಾಜದಲ್ಲಿ ಘನತೆ, ಗೌರವ, ಪ್ರತಿಷ್ಠೆ ಮತ್ತು ಸಂಪತ್ತು ಲಭಿಸುತ್ತಿವೆ. ಇದನ್ನು ಸಾಧಿಸಿರುವುದರಿಂದ ನಾವು ಕೆಲವು ದಿನಗಳು ಆನಂದದಿಂದ ಇರುತ್ತೇವೆ.

ಆದರೆ ಯಾವುದೇ ಸಾಮರ್ಥ್ಯವೊಂದರ ಪ್ರಭಾವವಾಗಲೀ ಕೆಲವು ದಿನಗಳು ಮಾತ್ರ ಇರುತ್ತದೆ, ಅದರ ನಂತರ ಕಡಿಮೆಯಾಗುತ್ತದೆ. ಅದರ ಪ್ರಭಾವವು ಕಡಿಮೆಯಾದ ನಂತರ ನಮಗೆ ಬೇಸರವಾಗಲು ಪ್ರಾರಂಭವಾಗುತ್ತದೆ. ಆ ಕ್ಷಣದಿಂದ ನಮಗಿರುವ ಜ್ಞಾನವು ನಮಗೆ ಕೆಲಸ ಮಾಡುವುದಿಲ್ಲ. ಇದರಿಂದಾಗಿ, ನಮ್ಮಲ್ಲಿ ತಿಳಿಯದೊಂದು ಕೊರತೆ ಏರ್ಪಡುತ್ತದೆ. ಈ ರೀತಿ ಎಷ್ಟೇ ಸಾಧಿಸಿದರೂ ಅದರ ಪ್ರಭಾವ ಸ್ವಲ್ಪ ಕಾಲದವರೆಗೆ ಮಾತ್ರ ಇರುವುದರಿಂದ ನಮಗೆ ಕೊರತೆ ಎನ್ನುವುದು ಏರ್ಪಡುತ್ತಲೇ ಇರುತ್ತದೆ. ಆಗ, ನಮಗೆ ದೈವ ಅಥವಾ ಶಾಶ್ವತವಾದ ಆನಂದವು ಬೇಕೆಂದೆನಿಸುತ್ತದೆ. ಅನೇಕ ರೀತಿಯ ಮಾರ್ಗಗಳನ್ನು ಪ್ರಯತ್ನಿಸಿದ ನಂತರ, ಕೊನೆಗೆ ನಾವು ದೈವದ ಅನುಭೂತಿಯನ್ನು ಪಡೆಯುತ್ತೇವೆ. ಪ್ರತಿಯೊಬ್ಬರು ಎಷ್ಟೇ ಜನ್ಮಗಳನ್ನು ಪಡೆದರೂ ಸರಿಯೇ ಕೊನೆಗೆ ದಿವ್ಯತ್ವವನ್ನು ಖಂಡಿತವಾಗಿ ತನ್ನದಾಗಿಸಿಕೊಳ್ಳುತ್ತಾರೆ. ಆದುದರಿಂದ ಸ್ನೇಹಿತರೇ! ದಯವಿಟ್ಟು ಅಹಂ ಅನ್ನು ದ್ವೇಷಿಸಬೇಡಿ. ಅದರ ಮೂಲಕವೇ ನಾವು ದೈವಾನುಭೂತಿಯನ್ನು ಹೊಂದಲು ಸಾಧ್ಯವಾಗುತ್ತದೆ. ಅದು ನಮ್ಮಲ್ಲಿ ಇಲ್ಲದ್ದಿದ್ದರೆ, ಸಾಗರದಲ್ಲಿರುವ ಮೀನಿನಂತೆ, ನಾವು ಸಹ ಎಂದಿಗೂ ನಾವೇ ದೇವರೆಂದು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಸಾಧ್ಯವಾದಷ್ಟು ಪ್ರೀತಿಯನ್ನು ನೀವು ಅದಕ್ಕೆ ನೀಡಿ ಅಹಂ ಅನ್ನು ಬಿಡುಗಡೆ ಮಾಡಿ. ಏಕೆಂದರೆ ಅಹಂ ಕರಗಿ ಹೋದಾಗಲೇ ದೈವವು ಪ್ರತ್ಯಕ್ಷನಾಗುತ್ತಾನೆ.

"ಮೈ ಡಿಯರ್ ಅಹಂ! ನೀನು ಶೀಘ್ರವಾಗಿ ಕರಗಿ ಹೋಗು. ನಾನು ಪುನಃ ದೈವದ ಹತ್ತಿರ ಹೊಸದನ್ನು ಕಲಿತುಕೊಂಡು, ಪುನಃ  ನಾನು ನನ್ನೊಳಗೆ ಮತ್ತೊಂದು ರೂಪವನ್ನು ಸೃಷ್ಟಿಸಿಕೊಂಡು ಅದನ್ನೂ ಸಹ ಎಂಜಾಯ್ ಮಾಡಬೇಕೆಂದುಕೊಳ್ಳುತ್ತಿದ್ದೇನೆ. ನನಗೆ ನಿನ್ನ ಪರ ಸಂಪೂರ್ಣವಾದ ವಿಶ್ವಾಸವಿದೆ. ನೀನು ನನ್ನ ಬೆಸ್ಟ್ ಫ್ರೆಂಡ್" ಎಂದು ಅಹಂ ಅನ್ನು ಪ್ರೀತಿಯಿಂದ ವಿದಾಯ ಹೇಳಿ. ಆಗ ಅಹಂ ತನ್ನನ್ನು ತಾನು ದೇವರಿಗೆ ಅರ್ಪಿಸಿಕೊಂಡು ಅವನಲ್ಲಿ ಆನಂದದಿಂದ ವಿಲೀನವಾಗುತ್ತದೆ.

ಇವೆಲ್ಲವೂ ನಾನು ದಿವ್ಯತ್ವದ ರುಚಿಯನ್ನು ಕಂಡು, ದ್ವಂದ್ವಗಳ ಪ್ರಾಮುಖ್ಯತೆಯನ್ನು ತಿಳಿದುಕೊಂಡಿರುವುದರಿಂದ ಈ ರೀತಿಯಾಗಿ ಹೇಳಲು ಸಾಧ್ಯವಾಗುತ್ತಿದೆ. ಮೊದಲ ಬಾರಿ ಅಹಂ ಅನ್ನು ಬಿಡುಗಡೆಗೊಳಿಸಲು ತುಂಬಾ ಕಷ್ಟವೆನಿಸಬಹುದು. ಆದರೆ ಇಷ್ಟವಿಲ್ಲದಿದ್ದರೂ ಅದನ್ನು ಬಿಡುಗಡೆಗೊಳಿಸಿ. ಏಕೆಂದರೆ ಅನಂತರ ನೀವು ನಿರೀಕ್ಷಿಸದ ಆನಂದವನ್ನು ಹೊಂದುತ್ತೀರಿ. ಹಾಗೆಯೇ ದೈವದ ಹತ್ತಿರ ಹೊಸ ಜ್ಞಾನವನ್ನು ಕಲಿತುಕೊಳ್ಳುತ್ತಾ, ನಾನೇ ದೇವರೆಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳಿ.

ಸಮಸ್ಯೆ ಎದುರಾದ ತಕ್ಷಣ ಆನಂದವು ಬೇಕೆಂದು ಸಂಕಲ್ಪಿಸಿ, ಅದಕ್ಕೆ ಸಂಬಂಧಿಸಿ ನಿಮಗಿರುರುವ ಜ್ಞಾನವನ್ನು ಬಿಡುಗಡೆಗೊಳಿಸಿ, ಅದಕ್ಕೆ ಸಂಬಂಧಿಸಿದ ಮನೋಭಾವನೆಗಳನ್ನು ಸಂಪೂರ್ಣವಾಗಿ ಅನುಭವಿಸಿದ ತಕ್ಷಣ ಆನಂದವು ಪ್ರತ್ಯಕ್ಷವಾಗುತ್ತದೆ. ಏಕೆಂದರೆ ಅದಕ್ಕೆ ಸಂಬಂಧಪಟ್ಟ ರೂಪಗಳು ಕರಗಿ ಹೋಗಿರುತ್ತದೆ. ಉದಾಹರಣೆಗೆ ಜ್ವರ ಬಂದಾಗ ಎಷ್ಟೇ ಭಯ ಉಂಟಾದರೂ ಅದಕ್ಕೆ ಸಂಬಂಧಿಸಿದ ನಂಬಿಕೆಗಳನ್ನು ಬಿಡುಗಡೆಗೊಳಿಸಿ, ಇದು ನನ್ನನ್ನು ಆನಂದದ ಕಡೆಗೆ ಕರೆದೊಯ್ಯುತ್ತದೆಂದು ಹೊಸ ನಂಬಿಕೆಯನ್ನಿಟ್ಟುಕೊಂಡು, ಜ್ವರಕ್ಕೆ ಸಂಬಂಧಿಸಿದ ನೋವುಗಳನ್ನು,

ದುಃಖಗಳನ್ನು ಸಂಪೂರ್ಣವಾಗಿ ಅನುಭವಿಸಿದರೆ ಆನಂದವು ಉಂಟಾಗುತ್ತದೆ. ಇಲ್ಲಿ ನಂಬಿಕೆಗಳು, ಆಲೋಚನೆಗಳು, ಅಭಿಪ್ರಾಯಗಳೆಲ್ಲವೂ ಸಹ ಅಹಂ ರೂಪಗಳೇ ಎಂದು ಗ್ರಹಿಸಿರಿ.

ನಮಗೆ ಬೇಸರ ಉಂಟಾದ ತಕ್ಷಣ ಅಹಂ ಅನ್ನು ಬಿಡುಗಡೆಗೊಳಿಸಿದರೆ, ಅದು ದೇವರ ಮಡಿಲಲ್ಲಿ ಸೇರಿ ಮೈಮರೆಯುತ್ತಾ ಅವನಲ್ಲಿ ಕರಗಿ ಹೋಗುತ್ತದೆ. ನಾವು ಏನಾದರೂ ಸಾಧಿಸಿದ ತಕ್ಷಣ ನಿಮಗೆ ಅಹಂ ಹೆಚ್ಚುತ್ತಿರುವಂತೆ ಮುಂಚಿತವಾಗೇ ತಿಳಿಯುತ್ತದೆ. ಆಗ ಅದನ್ನು ಗುರುತಿಸಿ, "ಮೈ ಡಿಯರ್ ಅಹಂ! ನನ್ನನ್ನು ಅಹಂ ಇಲ್ಲದ ಸ್ವಚ್ಛವಾದ ಸ್ಥಿತಿಗೆ ಕರೆದುಕೊಂಡು ಹೋಗು" ಎಂದು ಹೇಳಿ ಅದನ್ನೂ ಸಹ ಎಂಜಾಯ್ ಮಾಡಿದರೆ ತಕ್ಷಣವೇ ಆನಂದವು ಉಂಟಾಗುತ್ತದೆ.

ಹಾಗೆಯೇ ತುಂಬಾ ಜನರು ಅಹಂ ಇರಬಾರದೆನ್ನುವ ಭಾವನೆಯಲ್ಲಿರುತ್ತಾ, ಯಾವುದನ್ನಾದರೂ ಸಾಧಿಸಿದ ತಕ್ಷಣ ಕೈಗಳನ್ನು ಜೋಡಿಸಿ "ಇದರಲ್ಲಿ ನನ್ನದೇನಿದೆ ಸ್ವಾಮಿ, ಎಲ್ಲಾ ಆ ದೇವರ ಕೃಪೆ" ಎಂದು ಸಂಪೂರ್ಣ ಕ್ರೆಡಿಟನ್ನು ದೇವರಿಗೆ ಕೊಡುತ್ತಾರೆ. ಹೀಗೆ ಮಾಡುವುದರಿಂದಲೇ ದಿವ್ಯತ್ವಕ್ಕೂ ಮತ್ತು ಅವರ ನಡುವೆ ದೂರವು ಹಾಗೆಯೇ ಮುಂದುವರಿಯುತ್ತದೆ. ಏಕೆಂದರೆ ಅವರಲ್ಲಿ ತಲೆಯೆತ್ತಿದ ಅಹಂ ಅನ್ನು ಸರಿಯಾಗಿ ಡೀಲ್ ಮಾಡದೇ ಇರುವುದರಿಂದ ಅದು ಕರಗಿ ಹೋಗದೇ ಅವರಲ್ಲೇ ಸ್ಥಿರವಾಗಿಬಿಡುತ್ತದೆ. ಆದುದರಿಂದ ಏನೇ ಸಾಧಿಸಿದರೂ, ನಾನು ನನ್ನ ದೈವದ ಸಹಕಾರದೊಂದಿಗೆ ಸಾಧಿಸಿರುವೆನೆಂದು ನಿಮಗೆ ಮತ್ತು ನಿಮ್ಮ ದೈವಕ್ಕೆ ಕ್ರೆಡಿಟ್ ಅನ್ನು ಕೊಡಿ. ಹೀಗೆ ಮಾಡುವುದರಿಂದ ಅಹಂ ನಿಮ್ಮ ಬೆಸ್ಟ್ ಫ್ರೆಂಡ್ ಆಗುತ್ತದೆ. ನಂತರ ಅಹಂ ರೂಪವನ್ನು, ಅಂದರೆ ಸಾಧಿಸಿದೆನೆನ್ನುವ ಅನುಭೂತಿಯನ್ನು ಆನಂದದಿಂದ ಅನುಭವಿಸಿ ಅದರ ಮೂಲಕ ದೈವದ ಬಳಿ ತಲುಪಿ.

ನಿಮಗಿರುವ ಜ್ಞಾನವನ್ನು ಹಿಡಿದುಕೊಂಡು, ಆ ಜ್ಞಾನದ ಮೇಲೆ ನೀವು ಅವಲಂಭಿತರಾದ ತಕ್ಷಣ, ಆ ಜ್ಞಾನವು ನಿಮ್ಮನ್ನು ಬಂಧಿಸಿ ನಿಮಗೊಂದು ರೂಪವನ್ನು ಸೃಷ್ಟಿಸುತ್ತದೆ. ಇದರಿಂದಾಗಿ ಅಹಂ ಪ್ರತ್ಯಕ್ಷವಾಗುತ್ತದೆ. ಏಕೆಂದರೆ ಹಿಡಿದುಕೊಳ್ಳುವುದು, ಅವಲಂಭಿತರಾಗುವುದರಿಂದಲೇ ಅಹಂ ಹುಟ್ಟುತ್ತದೆ. ಆದ್ದರಿಂದ ಸರಿಯಾದ ಸಮಯದಲ್ಲಿ ನಿಮ್ಮಲ್ಲಿರುವ ಜ್ಞಾನವನ್ನು ಬಿಡುಗಡೆಗೊಳಿಸಿ. ಅಂದರೆ ಆನಂದವು ಕಡಿಮೆಯಾಗಿ ಬೇಸರ ಉಂಟಾದ ತಕ್ಷಣವೇ ನಿಮಲ್ಲಿರುವ ಜ್ಞಾನವನ್ನು ಬಿಡುಗಡೆಗೊಳಿಸಿ. ಆದ್ದರಿಂದ ನಿಮ್ಮಲ್ಲಿರುವ ಜ್ಞಾನದ ಮೇಲೆ ಅಥವಾ ನೀವು ಸಾಧಿಸಿದ ಪರಿಣಾಮಗಳ ಮೂಲಕ ಹುಟ್ಟುವ ವಿಶ್ವಾಸದ ಮೇಲೆ ಆಧಾರಪಡದೇ, ನಿಮ್ಮ ಮೇಲೆ, ನಿಮ್ಮ ದೈವದ ಮೇಲೆ ಮತ್ತು ನಿಮ್ಮ ಎಲ್ಲಾ ಭಾಗಗಳ ಮೇಲೆ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ. ಏಕೆಂದರೆ ಎಲ್ಲಾ ಭಾಗಗಳ ಮಧ್ಯ ಅನ್ಯೋನ್ಯತೆ ಇದ್ದರೆ ಮಾತ್ರ ನೀವು ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ. ಹಾಗೆಯೇ ಪರಿಣಾಮಗಳು ಬರದಿದ್ದರೂ ಸಹ ನಿಮ್ಮ ಎಲ್ಲಾ ಭಾಗಗಳೊಂದಿಗೆ ನೀವು ಆನಂದದಿಂದ ಇರಲು ಸಾಧ್ಯವಾಗುತ್ತದೆ.

ಅಹಂ ಇರಬಾರದೆನ್ನುವ ಭಾವನೆಯಲ್ಲಿದ್ದು, ಏನನ್ನಾದರೂ ಸಾಧಿಸಿದ ತಕ್ಷಣ ಅಹಂ ಉಂಟಾಗುತ್ತಿದ್ದರೆ, ಅದನ್ನು ಎಂಜಾಯ್ ಮಾಡದೇ ಅದರಿಂದ ಓಡಿ ಹೋಗಬೇಕೆಂದು ಅಥವಾ ಅದಕ್ಕೆ ಭಯಪಟ್ಟು ಆತುರವಾಗಿ ಬಿಡಿಸಿಕೊಳ್ಳಬೇಕೆಂದು ನೋಡಿದರೂ ಸಹ, ಅಹಂ ನಿಮ್ಮಲ್ಲಿ ಸ್ಥಿರವಾಗುತ್ತದೆ. ಏಕೆಂದರೆ ನಿಮಗೆ ತಿಳಿಯದೆಯೇ ನೀವು ಅಹಂಕಾರದೊಂದಿಗೆ ಯುದ್ಧವನ್ನು ಮಾಡುತ್ತಿರುತ್ತೀರಿ. ಇದರಿಂದಾಗಿ ಅದು ಇನ್ನಷ್ಟು ಶಕ್ತಿಯುತವಾಗುತ್ತದೆ.

ಕತ್ತಲ ನಂತರ ಬೆಳಕು ಅದೇ ರೀತಿ ಬೆಳಕಿನ ನಂತರ ಕತ್ತಲು ಹೇಗೆ ಬರುತ್ತವೋ ಅದೇ ರೀತಿಯಾಗಿ ಅಹಂ ನಂತರ ದಿವ್ಯತ್ವ ಮತ್ತು ದಿವ್ಯತ್ವದ ನಂತರ ಅಹಂ...ಬಂದು-ಹೋಗುತ್ತಲೇ ಇರುತ್ತವೆಂದು ಅದರಲ್ಲಿ ವಿಶ್ವಾಸವನ್ನಿಟ್ಟು, ನಿಮ್ಮ ಜೀವನದಲ್ಲಿ ಏನಿದೆಯೋ ಅದನ್ನು ಸಂಪೂರ್ಣವಾಗಿ ಎಂಜಾಯ್ ಮಾಡಿ. ನಾನೇ ದೈವವೆಂದು ನೀವು ಸಂಪೂರ್ಣವಾಗಿ ತಿಳಿದುಕೊಳ್ಳುವವರೆಗೆ ದಿವ್ಯತ್ವ ಹಾಗೂ ಅಹಂ ಬಂದು ಹೋಗುತ್ತಲೇ ಇರುತ್ತವೆಂದು ಗ್ರಹಿಸಿರಿ.

ನಿಜವಾಗಿಯೂ ಹೇಳಬೇಕೆಂದರೆ ಜೀವನದಲ್ಲಿ ಕೆಳಗೆ ಬೀಳದೇ ಇರುವವನಿಗಿಂತ, ಬಿದ್ದು ಎದ್ದವನೇ ದೃಢವಾಗಿರುತ್ತಾನೆ. ಕಷ್ಟಪಟ್ಟು ಸಾಧಿಸಿದವನಿಗೆ ಮಾತ್ರ ಸುಖದ ಬೆಲೆ ತಿಳಿಯುತ್ತದೆ. ದೇವರಿಗಾಗಿ ತಪಿಸುವ ಮಾನವನಿಗೆ ಮಾತ್ರ ದೇವರ ಬೆಲೆ ತಿಳಿಯುತ್ತದೆ. ಆದುದರಿಂದ ಸ್ನೇಹಿತರೇ! ದೈವದ ಬಳಿ ತಲುಪಲು ಆಸಕ್ತಿಯನ್ನು ತೋರಿಸಿ. ಇದಕ್ಕಾಗಿ ಸಾಧ್ಯವಾದಷ್ಟು ಅಹಂ ಅನ್ನು ಪ್ರೀತಿಯಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿ. ಈ ರೀತಿ ಯಾವಾಗ ಬೇಕೋ ಆಗ ಅಹಂ ಅನ್ನು ತ್ಯಜಿಸಿ, ನಂತರ ಹೊಸ ಅಹಂ ಅನ್ನು ಹೆಚ್ಚಿಸಿಕೊಂಡು, ಆನಂತರ ಪುನಃ ಆನಂದದಿಂದ ತ್ಯಜಿಸಬಲ್ಲ ವಿದ್ಯೆಯನ್ನು ಕಲಿತುಕೊಂಡರೆ ನಾವು ಸದಾ ಆನಂದದಿಂದ ಇರುತ್ತೇವೆ. ಏಕೆಂದರೆ ಕಲಿತುಕೊಳ್ಳುತ್ತಿರುವಾಗ ಮತ್ತು ತ್ಯಜಿಸುತ್ತಿರುವಾಗಲೂ ಸಹ ಆನಂದವು ಉಂಟಾಗುತ್ತದೆ. ಆದುದರಿಂದ ಅಹಂ ಸಹ ದಿವ್ಯತ್ವದಲ್ಲಿಯ ಒಂದು ಪ್ರಮುಖ ಭಾಗವೆನ್ನುವ ನಂಬಿಕೆಯನ್ನು ನಿಮ್ಮಲ್ಲಿ ದೃಢಪಡಿಸಿಕೊಂಡು, ಮೇಲೆ ಹೇಳಿದುದನ್ನು ಜ್ಞಾಪಕದಲ್ಲಿಟ್ಟುಕೊಂಡು, ಅದನ್ನು ನೀವೂ ಸಹ ಅನುಭವದಲ್ಲಿ ತಿಳಿದುಕೊಳ್ಳಿರಿ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

**http://darmam.com/downloads/telugutopics/13.aham.pdf**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen)

**https://www.youtube.com/playlist?list=PL7sfndcUtXfluvXK-CsihXrxGyyljh8n6**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ.

**http://darmam.com/important-topics.html**